ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **2187/2014**

ಚಾಸಾಃ 11
ಪ್ರಾಸಾಃ 12

ದಿನಾಂಕಃ **19-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಮಲ್ಲಿಕಾರ್ಜುನಯ್ಯ |
| ತಂದೆಯ/ಗಂಡನ ಹೆಸರು | : | ಪರಮೇಶ್ವರಯ್ಯ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಜಿ. ಅರಿವೇಸಂದ್ರ, ಗುಬ್ಬಿ ತಾಃ |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 10 ರವರ ಪರಿಚಯ ನನಗೆ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ನಿಪಿ-2 ಆಗಿರುತ್ತದೆ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಾನು ನೊಣವಿನಕೆರೆ ಪೊಲೀಸ್ ಠಾಣೆಯಲ್ಲಿ ಸುಮಾರು 2 ವರ್ಷಗಳ ಹಿಂದೆ ಮಾಡಿರುತ್ತೇನೆ. ನಿಪಿ-2 ರಲ್ಲಿ ಇರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆ ಮೇರೆಗೆ ನಾನು ಸಹಿಯನ್ನು ಹಾಕಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ 16-08-2014 ರಂದು ನೊಣವಿನಕೆರೆ ಗ್ರಾಮದ ಪ್ರಕಾಶ್ ರವರ ಮನೆಯ ಮುಂದೆ ನನ್ನ ಹಾಗೂ ಚಾಸಾ-1 ಮತ್ತು 12 ರವರ ಸಮಕ್ಷಮದಲ್ಲಿ ಚಾಸಾ-18 ರವರು ಸ್ಥಳ ಪಂಚನಾಮೆಯನ್ನು ನಿಪಿ-2 ರಂತೆ ಸಂಜೆ 5 ರಿಂದ 5-30 ಗಂಟೆವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜೊತೆ ಚಾಸಾ-1 ಮತ್ತು 12 ರವರು ಆ ಸಮಯದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ತಿಳಿದು ನಾನು ಆರೋಪಿತರಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.